ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಮಹಿಳಾ ಲಲಿತ ಪ್ರಬಂಧ ಸಾಹಿತ್ಯದ ವಿಭಿನ್ನ ನೆಲೆಗಳು

ಸಂಶೋಧನ ವಿದ್ಯಾರ್ಥಿನಿ

ನಿಕಿತಾ ರಮೇಶ ಚನ್ನಾಳೆ

ಮಾರ್ಗದರ್ಶಕರು

ಪ್ರೊ. ಮಹೇಶ ಚಿಂತಾಮಣಿ

ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಕನ್ನಡ ವಿಷಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧದ

ಪೂರ್ವಭಾವಿ ಸಾರಲೇಖ

೨೦೨೩

ಮಹಿಳಾ ಲಲಿತ ಪ್ರಬಂಧ ಸಾಹಿತ್ಯದ ವಿಭಿನ್ನ ನೆಲೆಗಳು

ಪರಿವಿಡಿ

ಅಧ್ಯಾಯ–೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧ ಪ್ರಸ್ತಾವನೆ
೧.೨ ಇದುವರೆಗೆ ನಡೆದ ಅಧ್ಯಯನಗಳು
೧.೩ ಅಧ್ಯಯನದ ಉದ್ದೇಶ
೧.೪ ಅಧ್ಯಯನದ ವ್ಯಾಪ್ತಿ
೧.೫ ಅಧ್ಯಯನದ ವಿಧಾನ
೧.೬ ಅಧ್ಯಯನದ ಸ್ವರೂಪ ಮತ್ತು ಇತಿಹಾಸ

ಅಧ್ಯಾಯ–೨ ಮಹಿಳಾ ಲಲಿತ ಪ್ರಬಂಧಕಾರ್ತಿಯರ ಜೀವನ ಮತ್ತು ಅವರ ಸಾಹಿತ್ಯ

೨.೧ ಟಿ. ಸುನಂದಮ್ಮ
೨.೨ ಸುನಂದಾ ಬೆಳಗಾಂವಕರ
೨.೩ ವಿಜಯಾ ಶ್ರೀಧರ
೨.೪ ಶೈಲಾ ಛಬ್ಬಿ
೨.೫ ಭುವನೇಶ್ವರಿ ಹೆಗಡೆ
೨.೬ ಗುರುದೇವಿ ಹುಲೆಪ್ಪನವರಮಠ

ಅಧ್ಯಾಯ–೩ ಮಹಿಳಾ ಲಲಿತ ಪ್ರಬಂಧ ಸಾಹಿತ್ಯದ ವಿಭಿನ್ನ ನೆಲೆಗಳು

೩.೧ ಸಾಮಾಜಿಕ ನೆಲೆಗಳು
೩.೨ ಧಾರ್ಮಿಕ ನೆಲೆಗಳು
೩.೩ ಕೌಟುಂಬಿಕ ನೆಲೆಗಳು
೩.೪ ಸಾಂಸ್ಕೃತಿಕ ನೆಲೆಗಳು
೩.೫ ವೈಚಾರಿಕ ಮತ್ತು ತಾತ್ವಿಕ ನೆಲೆಗಳು
೩.೬ ಸ್ತ್ರೀ ಸಂವೇದನೆಯ ನೆಲೆಗಳು
೩.೭ ಹಾಸ್ಯ ಮತ್ತು ವಿಡಂಬನೆಯ ನೆಲೆಗಳು
೩.೮ ನಿಸರ್ಗಪ್ರೇಮ ಮತ್ತು ಸೌಂದರ್ಯದ ನೆಲೆಗಳು

ಅಧ್ಯಾಯ–೪ ಮಹಿಳಾ ಲಲಿತ ಪ್ರಬಂಧದ ಭಾಷೆಯ ಸ್ವರೂಪ

೪.೧ ಮಹಿಳಾ ಲಲಿತ ಪ್ರಬಂಧಗಳ ಭಾಷೆ ಮತ್ತು ಶೈಲಿ
೪.೨ ಮಹಿಳಾ ಪ್ರಬಂಧಗಳಲ್ಲಿ ನಿರೂಪಣೆ ಮತ್ತು ಸಂಭಾಷಣೆಯ ಸ್ವರೂಪ

ಅಧ್ಯಾಯ–೫ ಸಮಾರೋಪ

ಅಧ್ಯಯನದ ಫಲಿತಗಳು
ಮುಂದಿನ ಅಧ್ಯಯನದ ಸಾಧ್ಯತೆಗಳು

ಅನುಬಂಧಗಳು:

ಆಕರ ಗ್ರಂಥಗಳು
ಪರಾಮರ್ಶನ ಗ್ರಂಥಗಳು

ಅಧ್ಯಾಯ–೧: ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಪ್ರಸ್ತಾವನೆ :

ಕನ್ನಡ ಸಾಹಿತ್ಯವು ಒಂದು ಸಾವಿರದ ಆರುನೂರು ವರ್ಷಗಳ ಇತಿಹಾಸ ಹೊಂದಿದೆ. ಈ ಕನ್ನಡ ಸಾಹಿತ್ಯ ಪರಂಪರೆ ಸಮೃದ್ಧವೂ–ವೈವಿಧ್ಯಮಯವೂ ಆಗಿದೆ. ಕವಿರಾಜಮಾರ್ಗಕಾರನಿಂದ ಹಿಡಿದು ಇಂದಿನವರೆಗೆ ಹರಿದು ಬಂದಿರುವ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆದು ನಿಂತಿದೆ. ಆಧುನಿಕ ಸಾಹಿತ್ಯವು ಹಲವಾರು ಪ್ರಕಾರಗಳಲ್ಲಿ ಮಹೋನ್ನತ ಬೆಳವಣಿಗೆಯನ್ನು ಕಂಡಿದೆ. ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ರೂಪಗೊಂಡ 'ಹೊಸಗನ್ನಡ' ಸಾಹಿತ್ಯ ಇಪ್ಪತ್ತನೆಯ ಶತಮಾನದಲ್ಲಿ ಆರಂಭಗೊಂಡಿತ್ತು. ಹೊಸ ಕನ್ನಡದಲ್ಲಿ ಕಾವ್ಯ, ಕಥೆ, ಕಾದಂಬರಿ, ಸಣ್ಣ ಕಥೆಗಳಂತಹ ಹೊಸ ಪ್ರಕಾರಗಳು ಹುಟ್ಟಿಕೊಂಡವು. ಅವುಗಳಲ್ಲಿ 'ಪ್ರಬಂಧ' ಪ್ರಕಾರವೂ ಒಂದು. ನವೋದಯ ಕಾಲದ ಸಾಹಿತಿಗಳು ಹೆಚ್ಚು ಪ್ರಬಂಧಗಳನ್ನು ಬರೆದರು. ಈ ಕಾಲದಲ್ಲಿ ಮಾಡಿದ ಸಾಹಿತ್ಯ ಕೃಷಿ ಬೇರಾವ ಕಾಲದಲ್ಲಿ ನಡೆಯಲಿಲ್ಲ. ಈ ಕಾಲಘಟ್ಟದಲ್ಲಿ ಕುವೆಂಪು, ಶಿವರಾಮ ಕಾರಂತ, ದ.ರಾ. ಬೇಂದ್ರೆ, ಗೋರೂರು ರಾಮಸ್ವಾಮಿ ಅಯ್ಯಂಗಾರ, ವಿ. ಸೀತಾರಾಮಯ್ಯ, ಎ.ಎನ್. ಮೂರ್ತಿರಾವ್, ಬೀಚಿ, ನಾ. ಕಸ್ತೂರಿ, ರಾ.ಯ. ಧಾರವಾಡಕರ್ ಮುಂತಾದವರು ಲಲಿತ ಪ್ರಬಂಧವನ್ನು ಕನ್ನಡದಲ್ಲಿ ಬೆಳೆಸಿದರು. ಪ್ರಬಂಧ ಸಾಹಿತ್ಯದ ಪ್ರಾರಂಭದಲ್ಲಿ ಗಂಭೀರ ವಸ್ತುಗಳಿಗೆ ಮನ್ನಣೆಕೊಡದೆ, ಹಾಸ್ಯ, ಮನೋರಂಜನೆಯ ನೆಲೆಗಟ್ಟಿನಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಮಹಿಳಾ ಪ್ರಬಂಧಕಾರ್ತಿಯರಲ್ಲಿ ಟಿ. ಸುನಂದಮ್ಮನವರು ಮೊದಲಿಗರು. ನಂತರ ಅನೇಕ ಮಹಿಳಾ ಪ್ರಬಂಧಕಾರ್ತಿಯರು ಪ್ರಬಂಧ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆ ನೀಡಿರುವುದನ್ನು ಗಮನಿಸಬಹುದು.

ಅಧ್ಯಯನದ ಉದ್ದೇಶ :

ಇತ್ತೀಚಿನ ದಿನಗಳಲ್ಲಿ ಸಾಹಿತ್ಯ ಪ್ರಕಾರಗಳನ್ನು ಕುರಿತು ಬಹುಮುಖ ನೆಲೆಗಳಲ್ಲಿ ಅಧ್ಯಯನಗಳು ನಡೆಯುತ್ತಿವೆ. ಇವುಗಳಲ್ಲಿ ಲಲಿತ ಪ್ರಬಂಧವೂ ಕೂಡ ಪ್ರಮುಖ ಪ್ರಕಾರವಾಗಿದೆ. ಮಹಿಳಾ ಲಲಿತ

ಪ್ರಬಂಧಗಳು ಅಧ್ಯಯನಕ್ಕೆ ಒಳಪಡದೆ ನಿರ್ಲಕ್ಷ್ಯಕ್ಕೆ ಒಳಪಟ್ಟಿದ್ದರಿಂದ ಈ ಅಧ್ಯಯನದಲ್ಲಿ ಈ ವಿಷಯದ ಆಯ್ಕೆ ಮಾಡಿಕೊಳ್ಳಲಾಗಿದೆ.

೧. ಹೊಸಗನ್ನಡ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕಥೆ, ಕಾದಂಬರಿ, ನಾಟಕ ಇವುಗಳನ್ನು ಕುರಿತು ಹೆಚ್ಚು ಅಧ್ಯಯನಗಳಾಗಿವೆ. ಆದರೆ ಮಹಿಳಾ ಲಲಿತ ಪ್ರಬಂಧಕಾರ್ತಿಯರ ಪ್ರಬಂಧಗಳ ವಿಭಿನ್ನ ನೆಲೆಗಳನ್ನು ಕುರಿತು ಅಧ್ಯಯನ ನಡೆದಿಲ್ಲ. ಆದ್ದರಿಂದ, ಮಹಿಳಾ ಲಲಿತ ಪ್ರಬಂಧ ಸಾಹಿತ್ಯದ ವಿಭಿನ್ನ ನೆಲೆಗಳು ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ.

೨. ಯಾವುದೇ ಸಾಹಿತ್ಯ ಪ್ರಕಾರಗಳಲ್ಲಿ ಕೇವಲ ಪುರುಷರು ಮಾತ್ರ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ಕೊಟ್ಟಿರುವುದಿಲ್ಲ. ಲೇಖಕಿಯರು ಕೂಡ ಕೊಡುಗೆಯನ್ನು ಕೊಟ್ಟಿದ್ದಾರೆ ಎಂಬುದನ್ನು ಅರಿಯುವುದು ಈ ಅಧ್ಯಯನದ ಉದ್ದೇಶವಾಗಿದೆ.

೩. ಈ ಮಹಾಪ್ರಬಂಧದ ಮೂಲ ಉದ್ದೇಶ, ಮಹಿಳಾ ಲಲಿತ ಪ್ರಬಂಧ ಸಾಹಿತ್ಯದಲ್ಲಿ ಕಂಡುಬರುವ ವಿಭಿನ್ನ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶ ಹೊಂದಿದೆ.

೪. ಮಹಿಳಾ ಪ್ರಬಂಧಕಾರ್ತಿಯರ ಪ್ರಬಂಧಗಳಲ್ಲಿನ ಸಾಮಾಜಿಕ ನೆಲೆಗಳು, ಕೌಟುಂಬಿಕ ನೆಲೆಗಳು, ವೈಚಾರಿಕ ನೆಲೆಗಳು, ತಾತ್ವಿಕ ನೆಲೆಗಳು, ಸ್ತ್ರೀವಾದಿ ನೆಲೆಗಳು, ಜೊತೆಗೆ ಮಹಿಳಾ ಲಲಿತ ಪ್ರಬಂಧಕಾರ್ತಿಯರ ಭಾಷೆಯ ಸ್ವರೂಪ, ಅವರ ನಿರೂಪಣಾ ಶೈಲಿ ಮತ್ತು ಪ್ರಬಂಧ ಸಾಹಿತ್ಯವನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಿದೆ.

ಅಧ್ಯಯನದ ವ್ಯಾಪ್ತಿ :

ಪ್ರಬಂಧ ಸಾಹಿತ್ಯವು ಕನ್ನಡಕ್ಕೆ ಪಾಶ್ಚಾತ್ಯರ ಕೊಡುಗೆಯಾದರೂ ಅದು ಕನ್ನಡದಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಪ್ರಬಂಧ ಪ್ರಕಾರವನ್ನು ಹಲವಾರು ರೂಪಗಳಲ್ಲಿ ಹಲವು ಹೆಸರುಗಳಲ್ಲಿ ಕನ್ನಡದಲ್ಲಿ ಕಾಣಬಹುದಾಗಿದೆ. ಹಲವಾರು ಮುಖ್ಯ ಪ್ರಬಂಧಕಾರರನ್ನು ಕುರಿತು ಅಧ್ಯಯನಗಳು ನಡೆದಿದ್ದು ತೀರ ವಿರಳ. ಪುರುಷ ಪ್ರಬಂಧಕಾರರು ಲೋಕವನ್ನು ನೋಡುವ ಅದನ್ನು ಗ್ರಹಿಸಿಕೊಳ್ಳುವ ರೀತಿ ಬೇರೆ ಆಗಿರುತ್ತದೆ. ಒಂದು ವಸ್ತುವನ್ನು ಕಂಡಾಗ ಅದರ ಬಗೆಗೆ ಇಬ್ಬರಲ್ಲಿಯೂ

ಭಿನ್ನಾಭಿಪ್ರಾಯಗಳು ಕಂಡುಬರುವುದು ಸಹಜವಾಗಿದೆ. ಪುರುಷ ಪ್ರಬಂಧಕಾರರನ್ನು ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಮಹಿಳಾ ಪ್ರಬಂಧಕಾರ್ತಿಯರ ಪ್ರಬಂಧಗಳು ಹೆಚ್ಚು ಅಧ್ಯಯನಕ್ಕೆ ಒಳಪಟ್ಟಿಲ್ಲ ಎಂಬುದನ್ನು ಗಮನಿಸಬಹುದಾಗಿದೆ. ಮಹಿಳಾ ಲಲಿತ ಪ್ರಬಂಧಕಾರ್ತಿಯರ ಪ್ರಬಂಧಗಳನ್ನು ವ್ಯಕ್ತಿನಿಷ್ಠವಾಗಿ, ವಸ್ತುನಿಷ್ಠವಾಗಿ ಅಧ್ಯಯನ ಹೆಚ್ಚು ಕಂಡುಬಂದಿಲ್ಲ. ಆದ್ದರಿಂದ, ಈ ಸಂಶೋಧನೆಯಿಂದಾಗಿ ಅದನ್ನು ನೀಗಿಸುವಂತಹ ಕಾರ್ಯವಾಗಬಹುದೆಂದು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ :

ಈ ಮಹಾಪ್ರಬಂಧದ ಅಧ್ಯಯನವನ್ನು ಆಯ್ದ ಮಹಿಳಾ ಲಲಿತ ಪ್ರಬಂಧಕಾರ್ತಿಯರ ಪ್ರಬಂಧ ಸಾಹಿತ್ಯಕ್ಕೆ ಸೀಮಿತಗೊಳಿಸಲಾಗಿದೆ. ಹಿರಿಯ ಮಹಿಳಾ ಪ್ರಬಂಧಗಾರ್ತಿಯರ ಪ್ರಬಂಧ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆಯ್ದ ಲಲಿತ ಪ್ರಬಂಧಕಾರ್ತಿಯರಲ್ಲಿ ಟಿ. ಸುನಂದಮ್ಮನವರು, ಸುನಂದಾ ಬೆಳಗಾಂವಕರ, ವಿಜಯಾ ಶ್ರೀಧರ, ಶೈಲಾ ಛಬ್ಬಿ, ಭುವನೇಶ್ವರಿ ಹೆಗಡೆ, ಗುರುದೇವಿ ಹುಲೆಪ್ಪನವರಮಠ ಅವರ ಲಲಿತ ಪ್ರಬಂಧಗಳ ವಿಷಯ ಮತ್ತು ವಿಭಿನ್ನ ನೆಲೆಗಳನ್ನು ಕುರಿತು ಈ ಅಧ್ಯಯನದ ವ್ಯಾಪ್ತಿ ಇದೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾಣಿಸಿಕೊಂಡ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಪ್ರಬಂಧ ಸಾಹಿತ್ಯವೂ ಒಂದು. ಪ್ರಬಂಧ ಸಾಹಿತ್ಯರೂಪ ಕನ್ನಡಕ್ಕೆ ಹೊಸದಲ್ಲದಿದ್ದರೂ ಇಂಗ್ಲಿಷ್‌ನ Essay ಎಂಬುದಕ್ಕೆ ಸಂವಾದಿಯಾಗಿ ಪ್ರಬಂಧ ಎಂಬ ಪದವನ್ನು ಬಳಸಲಾಗಿದೆ. ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಈ ಒಂದು ಪ್ರಕಾರ ಹಲವು ರೂಪಗಳಲ್ಲಿ ಕಾಣಬಹುದು. ಹರಟೆ, ಪ್ರಬಂಧ, ಲಲಿತ ಪ್ರಬಂಧ, ಲಘು ಪ್ರಬಂಧ, ಭಾವ ಪ್ರಬಂಧ ಹೀಗೆ ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಸಾಹಿತ್ಯವು ವಿಶಿಷ್ಟರೂಪವನ್ನು ತಾಳಿ ಬೆಳೆದು ಬಂದಿದೆ.

ಈ ಅಧ್ಯಯನದ ಸ್ವರೂಪವನ್ನು ಕುರಿತು ಹೇಳುವುದಾದರೆ ಇದು ಐದು ಅಧ್ಯಾಯಗಳನ್ನು ಹೊಂದಿದೆ. ಮಹಿಳಾ ಲಲಿತ ಪ್ರಬಂಧಗಾರ್ತಿಯರ ಸಾಹಿತ್ಯಕ ಸಾಧನೆ ಮತ್ತು ಆಯ್ದ ಲಲಿತ

ಪ್ರಬಂಧಗಳಲ್ಲಿನ ವಿಭಿನ್ನ ನೆಲೆಗಳನ್ನು ಕುರಿತು ಅಧ್ಯಯನ ನಡೆಸುತ್ತದೆ. ಮಹಿಳೆಯರ ಆ ಕಾಲದ ಸಾಮಾಜಿಕ, ಕೌಟುಂಬಿಕ, ವೈಚಾರಿಕ, ಧಾರ್ಮಿಕ, ಸಾಂಸ್ಕೃತಿಕ, ಸ್ತ್ರೀ ಸಂವೇದನೆಯ ನೆಲೆಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮಹಿಳಾ ಪ್ರಬಂಧಗಳಲ್ಲಿನ ಭಾಷೆಯ ಸ್ವರೂಪ, ಭಾಷೆಯ ನಿರೂಪಣಾ ಶೈಲಿಯ ಕಡೆಗೆ ಬೆಳಕು ಚೆಲ್ಲುತ್ತದೆ.

ಅಧ್ಯಯನದ ವಿಧಾನ :

ಪ್ರತಿಯೊಂದು ಅಧ್ಯಯನವೂ ತನ್ನದೇ ಆದ ವಿಧಾನವೊಂದನ್ನು ರೂಪಿಸಿಕೊಂಡಿರುತ್ತದೆ. ಈ ಅಧ್ಯಯನ ವಿಧಾನವು ವಿಮರ್ಶಾತ್ಮಕ ಮತ್ತು ವಿವರಣಾತ್ಮಕ ವಿಧಾನವನ್ನು ಹೊಂದಿದೆ.

೧. ಮಹಿಳಾ ಲಲಿತಪ್ರಬಂಧಗಳಲ್ಲಿ ವ್ಯಕ್ತವಾಗಿರುವ ವಿಷಯಗಳು ವಿವರಗಳನ್ನು ಇಟ್ಟುಕೊಂಡು ಅಧ್ಯಯನ ವಿಧಾನವನ್ನು ರೂಪಿಸಿಕೊಳ್ಳಲಾಗಿದೆ. ಆಯ್ದ ಮಹಿಳಾ ಲಲಿತಪ್ರಬಂಧಗಳನ್ನು ಸಮಗ್ರವಾಗಿ ಚರ್ಚೆಗೆ ಒಳಪಡಿಸಿ ಅದಕ್ಕೆ ಸಂಬಂಧಪಟ್ಟ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೨. ಪ್ರಸ್ತುತ ಅಧ್ಯಯನಕ್ಕೆ ಪೂರಕವಾದ ಬೇರೆ ಪ್ರಕಾರಗಳನ್ನು ಕುರಿತ ಚರ್ಚೆಗಳು ಮತ್ತು ವಿಚಾರಗಳನ್ನು ಸಹ ಬಳಸಿಕೊಳ್ಳಲಾಗಿದೆ.

ಅಧ್ಯಯನದ ಮಿತಿಗಳು :

ಮಹಿಳಾ ಲಲಿತ ಪ್ರಬಂಧ ಸಾಹಿತ್ಯದ ಬಗ್ಗೆ ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಮಿತಿಗಳನ್ನು ಹೊಂದಿದೆ. ಹೆಚ್ಚು ಮಹಿಳಾ ಲಲಿತಪ್ರಬಂಧಕಾರ್ತಿಯರ ಉಲ್ಲೇಖ ಕನ್ನಡ ಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಈ ಅಧ್ಯಯನದಲ್ಲಿ ಆಯ್ದ ಕೆಲವು ಮಹಿಳಾ ಲಲಿತ ಪ್ರಬಂಧಗಾರ್ತಿಯರ ಕುರಿತು ಅಧ್ಯಯನ ನಡೆಸುತ್ತಿರುವುದು ಈ ಅಧ್ಯಯನದಲ್ಲಿನ ಮಿತಿಯಾಗಿದೆ.

ಇದುವರೆಗೆ ನಡೆದ ಅಧ್ಯಯನಗಳು :

ಕನ್ನಡದಲ್ಲಿ ಕಾವ್ಯ, ಕಥೆ, ಕಾದಂಬರಿಗಳನ್ನು ಕುರಿತು ನಡೆದಷ್ಟು ಅಧ್ಯಯನಗಳು ಲಲಿತ ಪ್ರಬಂಧ ಸಾಹಿತ್ಯ ಕುರಿತಂತೆ ನಡೆದಿಲ್ಲ ಎಂಬದು ಗಮನಿಸಬೇಕಾದ ಸಂಗತಿ. ನಡೆದಿರುವ ಕೆಲವು ಅಧ್ಯಯನಗಳು

ಪ್ರಬಂಧಕಾರರ ಪ್ರಮುಖ ಪ್ರಬಂಧಕಾರ ಒಟ್ಟಾರೆ ನೋಟವನ್ನು ಒಳಗೊಂಡಿವೆಯೇ ಹೊರತು ನಿಗದಿತ ಆಯಾಮಗಳನ್ನು ಕುರಿತು ನಡೆದದ್ದು ತುಂಬಾ ಕಡಿಮೆ. ಪ್ರಬಂಧಕಾರ್ತಿಯರನ್ನು ನಿರ್ಲಕ್ಷಿಸಿದ್ದನ್ನು ಕಾಣಬಹುದಾಗಿದೆ. ಹಲವಾರು ಲಲಿತ ಪ್ರಬಂಧಕಾರ್ತಿಯರು ಕನ್ನಡ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಆದರೂ ಸಹ, ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪ್ರಬಂಧಕಾರ್ತಿಯರ ಕುರಿತು ಅಧ್ಯಯನ ನಡೆದಿದ್ದು ತುಂಬಾ ವಿರಳ ಎಂದೇ ಹೇಳಬಹುದಾಗಿದೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಎ.ಎನ್. ಮೂರ್ತಿರಾವ್, ಕುವೆಂಪು, ಗೋರೂರು ರಾಮಸ್ವಾಮಿ ಅಯ್ಯಂಗಾರ ಹೀಗೆ ಹಲವಾರು ಪ್ರಬಂಧಕಾರರು ತಮ್ಮ ಅನುಭವ ಆ ಕಾಲದ ಸಾಮಾಜಿಕ ಸ್ಥಿತಿಗತಿ ಧಾರ್ಮಿಕ ಸ್ಥಿತಿಗತಿಗಳನ್ನು ತಮ್ಮ ಪ್ರಬಂಧಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಇದನ್ನು ಗಮನಿಸಿದರೆ, ಪ್ರಬಂಧಕಾರ್ತಿಯರು ಸಹ ತಮ್ಮ ಪ್ರಬಂಧಗಳನ್ನು ವಿಭಿನ್ನ ನೆಲೆಗಳಲ್ಲಿ ರಚಿಸಿದ್ದನ್ನು ನೋಡಬಹುದಾಗಿದೆ. ಇವರು ವೈವಿಧ್ಯತೆಗಳಿಂದ ಕೂಡಿದ ಪ್ರಬಂಧಗಳನ್ನು ರಚಿಸಿದ್ದಾರೆ. ಈ ಕುರಿತು ವಿಸ್ತೃತವಾಗಿ ತಿಳಿದುಕೊಳ್ಳುವ ಪ್ರಯತ್ನವನ್ನು ಈ ಸಂಶೋಧನೆಯಿಂದಾಗಿ ಮಾಡಬಹುದಾಗಿದೆ.

೧೯೬೬ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದ 'ಪ್ರಬಂಧ' ಸಂಕಲನ ಒಂದಕ್ಕೆ ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದಿರುವ ಮುನ್ನುಡಿ ಐತಿಹಾಸಿಕ ಸ್ವರೂಪದ್ದಾಗಿದೆ. ಪ್ರಬಂಧ ಪ್ರಪಂಚ ಕೃತಿಯು ಪ್ರಬಂಧ ಸಾಹಿತ್ಯದ ಇತಿಹಾಸ ಸ್ವರೂಪ ಮತ್ತು ಹಿರಿಯ ಲೇಖಕರ ಅಭಿಪ್ರಾಯಗಳನ್ನು ಒಳಗೊಂಡ ಪ್ರಮುಖ ಕೃತಿಯಾಗಿದೆ. ಪ್ರಬಂಧ ಪ್ರಪಂಚ ಕೃತಿಯಲ್ಲಿ ಫ್ರೆಂಚ್, ಹಿಂದಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಳಿ, ಮರಾಠಿ ಈ ಭಾರತೀಯ ಭಾಷೆಗಳಲ್ಲಿ ಪ್ರಬಂಧ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವರಿಸಲಾಗಿದೆ. ಇದು ಕನ್ನಡದ ಜೊತೆಗೆ ಭಾರತೀಯ ಪ್ರಬಂಧ ಸಾಹಿತ್ಯದ ಅಧ್ಯಯನಕ್ಕೆ ಮೌಲಿಕವಾದ ಆಕರವಾಗಿದೆ. ಪ್ರಬಂಧ ಸಾಹಿತ್ಯದ ಇತಿಹಾಸವನ್ನು ತಿಳಿಯಲು ಧಾರವಾಡಕರ್ ಅವರ ಅಭಿನಂದನಾ ಗ್ರಂಥವು ಅಪೂರ್ವ ಆಕಾರ ಗ್ರಂಥವಾಗಿದೆ. ಪ್ರಬಂಧ ಸಾಹಿತ್ಯ ಡಾ. ಮಹಾದೇವ ಬಡಿಗೇರ್ ಅವರ 'ಲಲಿತ ಪ್ರಬಂಧ ಸಾಹಿತ್ಯ ಸಮೀಕ್ಷೆ' ಈ ಕೃತಿಗಳು ಈ ಅಧ್ಯಯನಕ್ಕೆ ಪೂರಕವಾದ ಕೃತಿಗಳಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಗೊಳಿಸಿರುವ

‘ಪ್ರಬಂಧ’ ೧೯೮೭, ೧೯೯೮ ಈ ಕೃತಿಗಳು ಮಹಿಳಾ ಲಲಿತ ಪ್ರಬಂಧಗಳ ಕುರಿತು ಅಧ್ಯಯನದ ಸಮೀಕ್ಷೆಗೆ ಒಳಪಟ್ಟ ಕೃತಿಗಳಾಗಿವೆ.

ಪ್ರಸ್ತುತ ಮಹಾಪ್ರಬಂಧದ ವಿಷಯಕ್ಕೆ ಪೂರಕವಾದ ಮಹಾಪ್ರಬಂಧಗಳು :

೧. ನವೋದಯ ಕಾಲದ ಪ್ರಬಂಧ ಸಾಹಿತ್ಯದಲ್ಲಿ ಗ್ರಾಮೀಣ ಜೀವನ, ಕುಮಾರ್. ಆರ್. (ಮೈಸೂರು ವಿಶ್ವವಿದ್ಯಾನಿಲಯ ೨೦೨೦)

೨. ನವ್ಯೋತ್ತರ ಪ್ರಬಂಧ ಸಾಹಿತ್ಯದ ಅಧ್ಯಯನ, ಪದ್ಮಾವತಿ ಎನ್. (ಮೈಸೂರು ವಿಶ್ವವಿದ್ಯಾನಿಲಯ ೨೦೧೭)

೩. ಹೈದರಾಬಾದ್ ಕರ್ನಾಟಕ ಲಲಿತ ಪ್ರಬಂಧ ಸಾಹಿತ್ಯ, ಸಂತೋಷ್ ಲಕ್ಷ್ಮಣ (ಗುಲಬರ್ಗಾ ವಿಶ್ವವಿದ್ಯಾಲಯ, ೨೦೧೮)

೪. ಕನ್ನಡ ಲಲಿತ ಪ್ರಬಂಧಕಾರರಲ್ಲಿ ಲೋಕದೃಷ್ಟಿಯ ವಿನ್ಯಾಸಗಳು ಚಂದ್ರಶೇಖರ್ ಎಂ. (ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೨೧)

೫. ಕನ್ನಡ ಸಾಹಿತ್ಯದಲ್ಲಿ ಹಾಸ್ಯ ಎಂ.ಎಸ್. ಸುಂಕಾಪೂರ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೬೦)

ಅಧ್ಯಾಯ–೨: ಮಹಿಳಾ ಲಲಿತ ಪ್ರಬಂಧಕಾರ್ತಿಯರ ಜೀವನ ಮತ್ತು ಅವರ ಸಾಹಿತ್ಯ :

ಈ ಅಧ್ಯಾಯದಲ್ಲಿ ಪ್ರಬಂಧಗಾರ್ತಿಯರ ಸಾಹಿತ್ಯಕ ಸಾಧನೆಯನ್ನು ಕುರಿತು ವಿವರಿಸಲಾಗಿದೆ. ಹಿರಿಯ ಪ್ರಬಂಧಗಳು ಟಿ. ಸುನಂದಮ್ಮನವರು ನಗೆಬರಹದ ಸಂಕಲನಗಳು, ನಗೆ ನಾಟಕಗಳು, ಹಲವಾರು ಪ್ರಶಸ್ತಿಗಳ ಕುರಿತು ಪ್ರಸ್ತಾಪಿಸಲಾಗಿದೆ. ಹಾಸ್ಯ ಸಾಹಿತಿಗಳಲ್ಲಿ ಅಗ್ರಗಣ್ಯರೆನಿಸಿದ ಟಿ. ಸುನಂದಮ್ಮನವರು ತಮ್ಮ ಒಂಭತ್ತನೆಯ ವಯಸ್ಸಿನಲ್ಲಿಯೇ ‘ಹೂವು’ ಎಂಬ ಕವನ ಬರೆದರು. ೨೫ ವರ್ಷಗಳ ಕಾಲ ಕೊರವಂಜಿಯಲ್ಲಿ ನಗೆ ಬರಹಗಳನ್ನು ಬರೆದರು. ಅವರ ಕಲ್ಪನೆಯ ದಂಪತಿಗಳಾದ ಮೈಲಾರಯ್ಯ, ಸರಸು ಕನ್ನಡದ ಹಾಸ್ಯ ಪ್ರಿಯರನ್ನು ತಲುಪಿ ಕಚಗುಳಿ ಇಟ್ಟು ನಗಿಸಿದರು. ಈ

ಪಾತ್ರಗಳಿಂದ ಮತ್ತು ಅವರ ಬರಹಗಳಿಂದ ಅಪಾರ ಜನಪ್ರಿಯತೆ ಪ್ರಾಪ್ತವಾಯಿತು. ಸುನಂದ ಬೆಳಗಾಂವಕರ, ವಿಜಯಾ ಶ್ರೀಧರ್, ಭುವನೇಶ್ವರಿ ಹೆಗಡೆ, ಗುರುದೇವಿ ಹುಲೆಪ್ಪನವರಮಠ ಮತ್ತು ಶೈಲಾ ಛಬ್ಬಿಯವರ ಪ್ರಬಂಧಗಳು ಮತ್ತು ಅವರ ಸಾಹಿತಿಕ ಸಾಧನೆಗಳನ್ನು ಈ ಅಧ್ಯಯನದಲ್ಲಿ ಗಮನಿಸಬಹುದಾಗಿದೆ.

ಅಧ್ಯಾಯ-೩: ಮಹಿಳಾ ಲಲಿತ ಪ್ರಬಂಧ ಸಾಹಿತ್ಯದ ವಿಭಿನ್ನ ನೆಲೆಗಳು:

ಈ ಅಧ್ಯಾಯದಲ್ಲಿ ಮಹಿಳಾ ಪ್ರಬಂಧಗಳನ್ನು ಸವಿಸ್ತಾರವಾಗಿ ಅಧ್ಯಯನವನ್ನು ನಡೆಸಿ ಅದರ ವಸ್ತುವಿನ ನೆಲೆಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಮಹಿಳಾ ಲಲಿತ ಪ್ರಬಂಧಕಾರ್ತಿಯರು ರಚಿಸಿರುವ ಸಾಮಾಜಿಕ ನೆಲೆ, ವೈಚಾರಿಕೆ ನೆಲೆ, ಧಾರ್ಮಿಕ ನೆಲೆ ಹೀಗೆ ಹಲವು ನೆಲೆಗಳನ್ನು ಒಳಗೊಂಡ ಪ್ರಬಂಧಗಳ ವಿಷಯವನ್ನು ಕುರಿತು ಇಲ್ಲಿ ಅಧ್ಯಯನ ನಡೆಸಲಾಗಿದೆ. ಸಾಮಾಜಿಕ ನೆಲೆಯ ಅಧ್ಯಯನವನ್ನು ಮಾಡಿದಾಗ ಆಹಾರ ಪದ್ಧತಿ, ವರದಕ್ಷಿಣೆ, ಭ್ರಷ್ಟಾಚಾರ, ಶಿಕ್ಷಣ, ಮೂಢನಂಬಿಕೆ, ಸಾಮಾಜಿಕ ಶೋಷಣೆಗಳನ್ನು ಒಳಗೊಂಡ ಪ್ರಬಂಧಗಳನ್ನು ಅಧ್ಯಯನ ಮಾಡಲಾಗಿದೆ. ವಿಜಯ ಶ್ರೀಧರ್ ಅವರ 'ಎಳ್ಳು ಕೊಳ್ಳಿರಿ ಒಳ್ಳೆ ಮಾತು ಆಡಿರಿ' ಪ್ರಬಂಧ ಸಾಮಾಜಿಕ ನೆಲೆಯ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಸುನಂದ ಬೆಳಗಾಂವಕರ್ ಅವರ 'ಮೊಸರು ಅವಲಕ್ಕಿ' ಪ್ರಬಂಧವು ಸಾಮಾಜಿಕ ಆಹಾರ ಪದ್ಧತಿಗಳ ಬಗ್ಗೆ ತಿಳಿಸಿಕೊಡುತ್ತದೆ. ವಿಜಯ ಶ್ರೀಧರ್ ಅವರ 'ಗಿಣಿ ರಾಮ ಗಿಣಿ ರಾಮ ಎಲ್ಲಾಡಿದೆ' ಪ್ರಬಂಧವು ಜಾನಪದ ಹಾಡುಗಳ ಬಗ್ಗೆ ತಿಳಿಸಿಕೊಡುತ್ತದೆ.

> "ಇದು ಅಕ್ಕನ ಕರ್ಕೊಂಡು
> ಬರಬೇಕು ಅಂತು
> ಇದು ಅಕ್ಕಿ ತರೂರ್ಯರು ಯಾರು ಅಂತು
> ಇದು ಸಾಲ ಮಾಡಿದರಾಯ್ತು ಅಂತು
> ಇದು ಸಾಲ ತೀರಿ ಸೋರ್ಯಾರು ಅಂತು"

ಇಡೀ ಪ್ರಬಂಧ ಮಗುವನ್ನು ಆಡಿಸುವ ವಿವಿಧ ಜಾನಪದ ಹಾಡುಗಳನ್ನು ಒಳಗೊಂಡಿದೆ.

"ಹತ್ತು ಹೊತ್ತಿಗೆ ಹಸಿದು ಹುಚ್ಚು ಹಿಡಿಸುವ ಹೊಟ್ಟೆಗಾಗಿ ಖರ್ಚು ನಮ್ಮೆಲ್ಲ ಕಸರತ್ತ ಕೆಲಸ ಸಿಕ್ಕರೆ ಬಿತ್ತು ಒಂದು ಹಿಡಿದುಕೊಳ್ಳು ಇಲ್ಲದಿದ್ದರೆ ಬರಿ ಭೋಗಸೆ ಕರಿ ನೀರು"

ಬಡತನಕ್ಕೆ ಜನಪದರ ಸಂವೇದನೆಯ ಗೀತೆಗಳನ್ನು ಬಳಸಿಕೊಳ್ಳುವ ಮೂಲಕ ಪ್ರಬಂಧದ ಸೊಗಸನ್ನು ಹೆಚ್ಚಿಸಿದ್ದಾರೆ. ಊಟವಿಲ್ಲದೆ ಹಸಿದ ಮನಸ್ಸುಗಳ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಭುವನೇಶ್ವರಿಯ ಕಡೆಯವರ 'ನಮ್ಮ ಹಳ್ಳಿಯ ಕವಿ ಸಮ್ಮೇಳನ' ಪ್ರಬಂಧದಲ್ಲಿ ನಳಿನಾಕ್ಷಿಯವರ ಮದುವೆಯಲ್ಲಿ ಹಾಡಿದ ಹಾಡನ್ನು ಹೇಳುತ್ತಾರೆ. ಈ ಪ್ರಬಂಧಗಳಿಂದ ಪರಂಪರೆ, ಸಂಸ್ಕೃತಿ, ಹಬ್ಬ ಹರಿದಿಗಳು, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬಂದಿರುವ ಪ್ರಬಂಧಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಸಾರಾ ಅಬೂಬಕರ್ ಅವರ 'ಅನಿಷ್ಟ ಪದ್ಧತಿಯ ವಿರುದ್ಧ", ಗುರುದೇವಿ ಹುಲಪ್ಪನವರಮಠ 'ಮನೆಗೆಲಸದ ಮಾನೀನಯರು' ಪ್ರಬಂಧಗಳಲ್ಲಿ ವಿವಿಧ ಸ್ಥಳದ ಕುಟುಂಬಗಳಲ್ಲಿನ ವರದಕ್ಷಣೆಯು ಪಡೆದಿರುವ ವಿವಿಧ ಸ್ವರೂಪವನ್ನು ವಿವರಿಸಲಾಗಿದೆ. ಭುವನೇಶ್ವರಿ ಹೆಗಡೆಯವರ 'ಮೂಢನಂಬಿಕೆಗಳ ಬೀಡಿನಲ್ಲಿ', ಸುನಂದಾ ಬೆಳಗಾಂವಕರ್ ಅವರ 'ಶಲ್ಲಕ' ಪ್ರಬಂಧಗಳು, ಸಾಮಾಜಿಕ ಅನಿಷ್ಟ ಪದ್ಧತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಹೀಗೆ ಆಯ್ದ ಪ್ರಮುಖ ಪ್ರಬಂಧಗಾರ್ತಿಯರ ಪ್ರಬಂಧಗಳನ್ನು ವೈಚಾರಿಕ, ಧಾರ್ಮಿಕ, ಸಾಮಾಜಿಕ, ಕೌಟುಂಬಿಕ, ತಾತ್ವಿಕ ನೆಲೆಗಳಿಂದ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ–೪: ಮಹಿಳಾ ಲಲಿತ ಪ್ರಬಂಧಗಳಲ್ಲಿನ ಭಾಷೆಯ ಸ್ವರೂಪ :

ಭಾವನೆಗಳನ್ನು ಅಕ್ಷರಗಳ ಮೂಲಕ ಅಭಿವ್ಯಕ್ತಿಪಡಿಸುವ ವಿಶಿಷ್ಟ ಮಾಧ್ಯಮ ಸಾಹಿತ್ಯ. ಪ್ರಬಂಧ ಕೂಡ ಅದರಲ್ಲಿ ಒಂದಾಗಿದೆ. ಪ್ರಬಂಧದ ಅಂದ ಮತ್ತು ಅದರ ಶಕ್ತಿ ಇರುವುದೇ ವಿಚಾರದ ವ್ಯಾಖ್ಯಾನ ಸ್ವರೂಪದಲ್ಲಿ. ಪ್ರಬಂಧಗಳಲ್ಲಿ ಬಳಕೆಯಾಗುವ ವಕ್ರೋಕ್ತಿ ಮತ್ತು ವುಂಗ್ಯೋಕ್ತಿಗಳು ಪ್ರಬಂಧಗಳ ಸೊಗಸನ್ನು ಮತ್ತಷ್ಟು ಹೆಚ್ಚಿಸಿವೆ. ಸುನಂದಾ ಬೆಳಗಾಂವಕರ್ ಅವರ ಪ್ರಬಂಧಗಳಲ್ಲಿ ಕಂಡುಬರುವ ನೈಲಾನ್ ಸೀರೆ, ಲೇಡೀಸ್ ರೂಮು, ತುಂಬುಗಾಯಿ ಪಲ್ಯ, ಭಕ್ಕರಿ ಯಾರ ಇಲ್ಯಂತರ್, ಬರ್ಲಿ, ಹೋಗ್ಲಿ ಚಲೋ ಆತು ಬಿಡು ಮುಂತಾದ ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆ ಪದಗಳು ಪ್ರಬಂಧಗಳಿಗೆ

ಭಾಷಾ ವೈವಿಧ್ಯತೆಯನ್ನು ತಂದುಕೊಟ್ಟಿದೆ. ಪ್ರಬಂಧಗಾರ್ತಿಯರ ಪ್ರಬಂಧಗಳಲ್ಲಿ ಗಾದೆಗಳು ಪೌರಾಣಿಕ ಅಂಶಗಳನ್ನು ಯಥೇಚ್ಛವಾಗಿ ಬಳಸಿ ಪ್ರಬಂಧಗಳಿಗೆ ವಿವಿಧ ಆಯಾಮಗಳನ್ನು ಒದಗಿಸಿದ್ದಾರೆ. ಪ್ರಬಂಧಗಳಲ್ಲಿ ಬಳಸಿರುವ ಗಾದೆಗಳು ವಿಜಯಾ ಶ್ರೀಧರ್ ಅವರ ಜನಪದ ಭಾಷೆ ಬದುಕಿನ ಅನುಭವದಿಂದ ಕೂಡಿ ರಚಿಸಲ್ಪಟ್ಟವಾಗಿದೆ. ಪ್ರಬಂಧಗಳಲ್ಲಿ ನಿರೂಪಣೆ ಶೈಲಿಯೂ ಪ್ರಮುಖವಾಗಿದೆ. ಲೌಕಿಕಾನುಭವಗಳು, ಸ್ವಾನುಭವಗಳು ಕೆಲವು ಪ್ರಬಂಧಗಳಲ್ಲಿ ಕಥನಾತ್ಮಕವಾಗಿವೆ. ಕೆಲವು ಪ್ರಬಂಧಗಳು ನೇರ ನಿರೂಪಣೆಯನ್ನು ಪಡೆದಿವೆ. ವಿಜಯಾ ಕೆಲವೊಂದು ಪ್ರಬಂಧಗಳು ಸಂಭಾಷಣೆಯ ರೀತಿಯಲ್ಲಿ ರೂಪಿತವಾಗಿವೆ. ಸುಂದನಾ ಬೆಳಗಾಂವಕರ್ ಅವರ ಪ್ರಬಂಧದಲ್ಲಿ ಅವರ ಗಂಡ ಹೆಂಡತಿಯ ಸಂಭಾಷಣೆಯನ್ನು ಕುರಿತು ಗುರುತಿಸಬಹುದು. ಶೈಲಾ ಛಬ್ಬಿ ಅವರ 'ಕೈಲಾಸದಲ್ಲಿ ಕಡುಬು' ಪ್ರಬಂಧದಲ್ಲಿ ನಾರದ ಶಿವನ ಮನೆ ಹತ್ತಿರ ಹೋದಾಗ ಗಣೇಶ ಪಾರ್ವತಿ ಮತ್ತು ಶಿವನ ಮಾತುಗಳ ಸಂಭಾಷಣೆಯ ರೂಪದಲ್ಲಿವೆ. ಬಹುತೇಕ ಬರಹಗಾರರಿಗೆ ಬಾಲ್ಯದ ಅನುಭವಗಳು ಕಾಡಿವೆ. ಸಾಕಷ್ಟು ಪ್ರಬಂಧಗಳಲ್ಲಿ ಬಾಲ್ಯ ಪ್ರಪಂಚವೇ ಪ್ರಬಂಧಗಳ ವಸ್ತುವಾಗಿವೆ. ಪ್ರಬಂಧಗಳು ತಮ್ಮ ಸರಳತೆಯನ್ನು ಬಿಟ್ಟುಕೊಟ್ಟಿಲ್ಲ. ಪ್ರಬಂಧಗಳು ಎಲ್ಲಿಯೂ ಕ್ಲಿಷ್ಟವಾಗಿಲ್ಲ. ಒಟ್ಟಾರೆಯಾಗಿ ಮಹಿಳಾ ಪ್ರಬಂಧಗಳ ಭಾಷಾ ಸ್ವರೂಪವನ್ನು ನೋಡಿದಾಗ ತಿಳಿದುಬರುವ ಅಂಶಗಳೆಂದರೆ ಪ್ರಬಂಧಗಳ ಭಾಷೆ ತುಂಬಾ ಲಲಿತವಾಗಿದೆ ಮತ್ತು ನೂತನ ಪದಗಳ ಬಳಕೆಯಾಗಿವೆ.

ಅಧ್ಯಾಯ-೫: ಸಮಾರೋಪ

ಕನ್ನಡದಲ್ಲಿ ಪ್ರಬಂಧ ಸಾಹಿತ್ಯವು ನವೋದಯ ಕಾಲದಲ್ಲಿ ಹೆಚ್ಚು ಮುನ್ನೆಲೆಗೆ ಬಂದಿರುವುದು ಕಂಡುಬಂದರೂ ಸಹ, ನವ್ಯೋತ್ತರ ಪ್ರಬಂಧಗಳು ಹೊಸ ವಸ್ತು ವಿಷಯಗಳನ್ನು ಆಯ್ಕೆ ಮಾಡಿಕೊಂಡು ಪ್ರಬಂಧ ಸಾಹಿತ್ಯಕ್ಕೆ ವಿಶಿಷ್ಟವಾದ ಮಹತ್ವವನ್ನು ತಂದುಕೊಟ್ಟಿದೆ. ಅತ್ಯಂತ ಗಂಭೀರ ವಿಷಯಗಳನ್ನು ಸಹ ಪ್ರಬಂಧ ಸಾಹಿತ್ಯವು ಸರಳವಾದ ಭಾಷೆ ಮತ್ತು ವಿಡಂಬನೆಗಳ ಮೂಲಕ ಚಿತ್ರಿಸುತ್ತದೆ. ಅವುಗಳ ಸ್ವರೂಪವನ್ನು ವ್ಯಕ್ತಪಡಿಸುತ್ತದೆ. ಲಲಿತ ಪ್ರಬಂಧಕಾರ್ತಿಯರು ಹೆಚ್ಚಾಗಿ ತಮ್ಮ ಕುಟುಂಬದೊಂದಿಗೆ ಬೆರೆತಿರುವುದರಿಂದ ಅವರ ಪ್ರಬಂಧ ತಮ್ಮ ಸುತ್ತಮುತ್ತಲಿನ ವಿಷಯವನ್ನು ತಮ್ಮ ಪ್ರಬಂಧಗಳ

ವಸ್ತುಗಳನ್ನಾಗಿ ಮಾಡಿಕೊಂಡಿರುವುದು ಕಂಡುಬರುತ್ತದೆ. ಮಹಿಳಾ ಲಲಿತ ಪ್ರಬಂಧಗಳಲ್ಲಿ ಕನ್ನಡದ ಸಂಸ್ಕೃತಿ ಮತ್ತು ಪರಂಪರೆ ಹಾಸುಹೊಕ್ಕಾಗಿದೆ ಎಂದು ಹೇಳಬಹುದು.

ಅಧ್ಯಯನದ ಫಲಿತಗಳು :

೧. ಆಧುನಿಕ ಸಮಾಜದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಸಂಘರ್ಷದ ವಿವಿಧ ನೆಲೆಗಳ ಸ್ಪಷ್ಟವಾದ ಚಿತ್ರಣವನ್ನು ಪ್ರಬಂಧಗಳಲ್ಲಿ ಕಾಣಬಹುದು.

೨. ಕನ್ನಡದ ಪರಂಪರೆ ಮತ್ತು ಸಾಂಸ್ಕೃತಿಕ, ಧಾರ್ಮಿಕ ಮತ್ತು ಜೀವನದ ಮಹತ್ವದ ಪ್ರಬಂಧಗಳ ವ್ಯಕ್ತಪಡಿಸುತ್ತವೆ.

೩. ಪ್ರಬಂಧಗಳಲ್ಲಿ ಕಾಣಿಸಿಕೊಂಡ ಮಹಿಳಾ ಸ್ಥಾನಮಾನವನ್ನು ಗುರುತಿಸಬಹುದಾಗಿದೆ.

೪. ಮನುಷ್ಯ ಮತ್ತು ಪ್ರಕೃತಿಗಳ ಅಂತರ್ ಸಂಬಂಧವನ್ನು, ಒಂದು ಪ್ರದೇಶದ ಪ್ರಾಕೃತಿಕ ಪರಿಸರವನ್ನು ಮನಗಾಣಬಹುದಾಗಿದೆ.

ಮುಂದಿನ ಅಧ್ಯಯನ ಸಾಧ್ಯತೆಗಳು :

೧. ನವ್ಯೋತ್ತರ ಮಹಿಳಾ ಲಲಿತ ಪ್ರಬಂಧ ಸಾಹಿತ್ಯವನ್ನು ಕುರಿತು ಸಮಗ್ರವಾಗಿ ಅಧ್ಯಯನ ಮಾಡಬಹುದು.

೨. ಪ್ರಮುಖ ಪ್ರಬಂಧಕಾರರ ಪ್ರಬಂಧಗಳನ್ನೂ ಸ್ತ್ರೀವಾದಿ ಅಧ್ಯಯನದ ಹಿನ್ನೆಲೆಯಲ್ಲಿ ಮಾಡಬಹುದು.

೩. ಮಹಿಳಾ ಲಲಿತ ಪ್ರಬಂಧ ಸಾಹಿತ್ಯದಲ್ಲಿ ಹಾಸ್ಯ ಮತ್ತು ವಿಡಂಬನೆ ಕುರಿತು ಅಧ್ಯಯನ ನಡೆಸಬಹುದು.

೪. ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಮಹಿಳಾ ಲಲಿತ ಪ್ರಬಂಧ ಸಾಹಿತ್ಯದ ಆಶಯಗಳನ್ನು ಕುರಿತು ಅಧ್ಯಯನ ನಡೆಸಬಹುದು.

ಆಕರ ಗ್ರಂಥಗಳು:

೧. ಗುಂಡೂರಾವ್ ವೈ.ಎನ್. – ಬೆಸ್ಟ್ ಆಫ್ ಸುನಂದಮ್ಮ

೨. ಗುರುದೇವಿ ಹುಲೆಪ್ಪನವರ ಮಠ – ಬಿಡುಗಡೆದ ಸಡ

೩. ನಾಗರಾಜ ಎಂ. – ಮಹಿಳಾ ಲಲಿತ ಪ್ರಬಂಧಗಳು

೪. ಭುವನೇಶ್ವರಿ ಹೆಗಡೆ – ಸಮಗ್ರ ಲಲಿತ ಪ್ರಬಂಧಗಳು

೫. ಮನು ಬಳಿಗಾರ್ – ಲಲಿತ ಪ್ರಬಂಧ

೬. ವಿಜಯಾ ಶ್ರೀಧರ – ಸಮಗ್ರ ಲಲಿತ ಪ್ರಬಂಧಗಳು
 – ಅನುಭವದಡಿಗೆಯ ಮಾಡಿ

೭. ಶೈಲಾ ಛಬ್ಬಿ – ಬಿಳಿ ಆನೆ

೮. ನಬಿಹಾ – ಪ್ರಬಂಧ ೧೯೯೯

೯. ಸುನಂದಾ ಬೆಳಗಾಂವಕರ್ – ಕಜ್ಜಾಯ

ಪರಾಮರ್ಶನ ಗ್ರಂಥಗಳು:

೧. ಕೀರ್ತಿನಾಥ ಕುರ್ತಕೋಟಿ – ಯುಗಧರ್ಮ ಮತ್ತು ಸಾಹಿತ್ಯ

೨. ಕುಮಾರ ಆರ್. – ನವೋದಯ ಕಾಲದ ಪ್ರಬಂಧ ಸಾಹಿತ್ಯದಲ್ಲಿ ಗ್ರಾಮೀಣ ಜೀವನ (ಮೈಸೂರು ವಿಶ್ವವಿದ್ಯಾನಿಲಯ ೨೦೨೦)

೩. ಚಂದ್ರಶೇಖರ ಎಂ. – ಕನ್ನಡ ಲಲಿತ ಪ್ರಬಂಧಕಾರರಲ್ಲಿ ಲೋಕದೃಷ್ಟಿಯ ವಿನ್ಯಾಸಗಳು (ಕನ್ನಡ ವಿಶ್ವವಿದ್ಯಾಲಯ ೨೦೨೧)